ಮಂಗಳೂರು ತಾಲ್ಲೂಕಿನ ಪರಿಶಿಷ್ಟ ವರ್ಗ ಮತ್ತು ಜನಾಂಗದವರಿಗೆ ಭೂನ್ಯಾಯ ಮಂಡಳಿಯಿಂದ ಭೂ ಹಿಡುವಳಿ ಸಿಕ್ಕಿರುವುದು

೧೮೪೬. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ನೀರಾವರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕು ಭೂ ನ್ಯಾಯ ಮಂಡಳಿಯಿಂದ ಭೂ ಹಿಡುವಳಿ ಸಿಕ್ಕಿರುವ ಪರಿಶಿಷ್ಟ ವರ್ಗ ಮತ್ತು ಜನಾಂಗದವರ ಸಂಖ್ಯೆ ಎಷ್ಟು?

ಆ) ಈ ಅವಧಿಯಲ್ಲಿ ಸದರಿ ಹಿಡುವಳಿಗೆ ಪರಿಶಿಷ್ಟ ವರ್ಗದವರಿಂದ ಸಲ್ಲಿಸಿದ ಅರ್ಜಿಗಳೆಷ್ಟು?

ಇ) ಆ ಪೈಕಿ ಪುರಸ್ಕರಿಸಿದ ಮತ್ತು ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ನೀರಾವರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

	೧೯೮೬-೮೭	೧೯೮೭-೮೮
ಅ)	೨೧	೨೯೯
ಆ)	೧೯೮೬-೮೭	೧೯೮೭-೮೮
	ಇಲ್ಲ	ಇಲ್ಲ

ಇ) (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ.ಎಸ್. ಆಚಾರ್ (ಶ್ರೀ ಬಿ.ಎಂ. ಇದಿನಬ್ಬರವರ ಪರವಾಗಿ).—ಮಂಗಳೂರು ಭೂನ್ಯಾಯ ಮಂಡಲಿಯಲ್ಲಿ ತನಿಖೆಗಾಗಿ ಬಾಕಿ ಇರುವ ಅರ್ಜಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಅರ್ಜಿಗಳು ಒಟ್ಟು ಎಷ್ಟು ಬಾಕಿ ಇವೆ? ಮತ್ತು ಎಷ್ಟು ವರ್ಷಗಳಿಂದ ಬಾಕಿ ಇವೆ? ಇನ್ನಾದರೂ ತನಿಖೆಗೆ ಆದ್ಯತೆ ನೀಡಲಾಗುವುದೆ? ಭೂನ್ಯಾಯ ಮಂಡಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಅರ್ಜಿಗಳು ತಿರಸ್ಕಾರವಾಗಿ ಆ ಜನಾಂಗದವರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್.ಆರ್. ಬೊಮ್ಮಾಯಿ —ನನ್ನಲ್ಲಿ ಈಗ ಪರಿಶಿಷ್ಟ ಜಾತಿ ಮತ್ತು ವರ್ಗದವರ ಅರ್ಜಿಗಳು ಎಷ್ಟಿವೆ ಎಂಬ ಮಾಹಿತಿ ಇಲ್ಲ. ಅರ್ಜಿಯಲ್ಲಿ ಜಾತಿಯ ಸೂಚನೆ ಇರುವುದಿಲ್ಲ ಆದರೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ವಿಚಾರ ಮಾಡುತ್ತೇನೆ ಮತ್ತು ಭೂನ್ಯಾಯ ಮಂಡಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಪ್ರಾಶಸ್ತ್ಯ ಕೊಟ್ಟು ಅವರ ಅರ್ಜಿಗಳನ್ನು ನಿರ್ಣಯ ಮಾಡಲಿಕ್ಕೆ ತಿಳಿಸುತ್ತೇನೆ.

ಗಿರಿ ಜನ ಕಲ್ಯಾಣ ಯೋಜನೆ ಮತ್ತು ಜೇನು ಕುರುಬರ ಕಲ್ಯಾಣ ಕಛೇರಿಯ ಬಗ್ಗೆ

೧೦೨೫. ಶ್ರೀಮತಿ ಸುಮಾ ಮಂತ. (ವಿರಾಜಪೇಟೆ) :—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ಕ್ಷೇತ್ರವು ಗಿರಿಜನರಿರುವ ಕ್ಷೇತ್ರವಾಗಿದ್ದು ಇಲ್ಲಿನ ಗಿರಿಜನ ಕಲ್ಯಾಣ ಕಛೇರಿಗಳು ಹುಣಸೂರಿನಲ್ಲಿರುವುದು ನಿಜವೇ

ಆ) ಹಾಗಿದ್ದಲ್ಲಿ, ಸ್ಥಳೀಯ ಗಿರಿಜನರಿಗೆ ಇದರ ಉಪಯೋಗ ದೊರಕದೆ ಅದರ ದುರುಪಯೋಗ ವಾಗುತ್ತಿರುವ ಕಾರಿತು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ದುರುಪಯೋಗದ ಬಗ್ಗೆ ಮತ್ತು ಸದರಿ ಕಛೇರಿಗಳನ್ನು ವಿರಾಜಪೇಟೆಗೆ ವರ್ಗಾಯಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?